**ದಿನಾಂಕಃ 05.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 1 ರಿಂದ 3ನೇ ಪ್ರತಿವಾದಿಗಳ ಪರ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ಜಮೀನಿನ ವ್ಯವಹಾರ ಹೇಗೆ ಮಾಡುವುದು ಎಂದು ನನಗೆ ಗೊತ್ತು ಎಂದರೆ ಕೇಳಿಕೊಂಡು ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿ ನನಗೆ ಕ್ರಯದ ಕರಾರು ಪತ್ರ ಮಾಡುವ ಸಮಯದಲ್ಲಿ ಪರಿಚಯವಾಗಿರುತ್ತದೆ. ನನಗೆ 1ನೇ ಪ್ರತಿವಾದಿ ಜಡೇಸ್ವಾಮಿಯವರ ಮೂಲಕ ಪರಿಚಯವಾಗಿರುತ್ತಾರೆ. ಜಡೇಸ್ವಾಮಿ ಗುಂಡೇಗಾಲ ಗ್ರಾಮದವರಿರುತ್ತಾರೆ. ಹನೂರಿನಲ್ಲಿ ನಾನು ಯಾವುದೇ ಜಮೀನಿಗೆ ಸಂಬಂಧಪಟ್ಟಂತೆ ಸೇಲ್ ಅಗ್ರಿಮೆಂಟ್ ಮಾಡಿಸಿಕೊಂಡಿಲ್ಲ. 1ನೇ ಪ್ರತಿವಾದಿಯನ್ನು ಮತ್ತು ಜಡೇಸ್ವಾಮಿ ಮತ್ತು ಸುಂದರಪ್ಪರವರನ್ನು ದಿನಾಂಕಃ 15.07.2021 ಈ ಕ್ರಯಕ್ಕೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಯ ಮನೆಯಲ್ಲಿ ಭೇಟಿ ಮಾಡಿದ್ದೇನೆ. ಒಂದು ಎಕರೆಗೆ ಒಂದು ಲಕ್ಷದ ಮೂವತ್ತು ಸಾವಿರದಂತೆ ತೀರ್ಮಾನವಾಗಿರುತ್ತದೆ. ದಿನಾಂಕಃ 14.07.2021 ರಂದು ಯಾವುದೇ ಬರವಣಿಗೆಯಾಗಿರುವುದಿಲ್ಲ. ಕ್ರಯದ ಕರಾರು ಪತ್ರ ದಿನಾಂಕಃ 24.07.2019 ರಂದು ಆಗಿರುತ್ತದೆ. ಆವತ್ತೇ ಕ್ರಯದ ಕರಾರು ಪತ್ರ ನೋಂದಣಿಯಾಗಿರುತ್ತದೆ. ದಿನಾಂಕಃ 18.07.2019 ರಂದು ಮೂರು ಲಕ್ಷ ಮುಂಗಡ ಹಣ ಕೊಟ್ಟ ಬಗ್ಗೆ ಬರವಣಿಗೆ ಮಾಡಿಸಿದಿರಾ ಎಂಬ ಪ್ರಶ್ನೆಗೆ ಆರ್ ಟಿ ಜಿ ಎಸ್ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಎರಡು ಲಕ್ಷ ಹಣವನ್ನು ನನ್ನ ತಮ್ಮ 2ನೇ ವಾದಿ ಚೆಕ್ಕಿನ ಮೂಲಕ ಪ್ರತಿವಾದಿಗಳಿಗೆ ಕೊಟ್ಟಿರುತ್ತಾರೆ.

1ನೇ ಪ್ರತಿವಾದಿ ನನಗೆ ಅಗ್ರಿಮೆಂಟ್ ಆಗುವ ಪೂರ್ವದಿಂದಲೂ ಪರಿಚಯವಿರುತ್ತಾರೆ ಎಂದು ಹೇಳುವುದು ಸರಿಯಲ್ಲ. ಆ ಕಾರಣ ನಾನು ದಿನಾಂಕಃ 18.07.2019 ರಂದು ಮೂರು ಲಕ್ಷ ಸಾಲವಾಗಿ 1ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿಯು ಮುಂಗಡ ಹಣ ಕೊಟ್ಟಿದ್ದೇನೆಂದು ಉತ್ತರಿಸುತ್ತಾರೆ. ನಂತರ ಮತ್ತೆ ಎರಡು ಲಕ್ಷ ಹಣವನ್ನು ಸಾಲ ಕೇಳಿದ್ದು ನಾನು ನನ್ನ ತಮ್ಮನಿಂದ ಕೊಡಿಸಿದ್ದೇನೆ ಎಂದು ಹೇಳುವುದು ಸುಳ್ಳು. ಸದರಿ ಐದು ಲಕ್ಷದ ಭದ್ರತೆಗಾಗಿ 1ನೇ ಪ್ರತಿವಾದಿ ಚೆಕ್ಕು ಕೊಡುತ್ತೇನೆ ಎಂದು ಹೇಳಿದಾಗ ನಾನು ಭೋಗ್ಯ ಬರೆದುಕೊಡಿ ಎಂದು ಹೇಳಿದ್ದು, ಭೋಗ್ಯ ಈಗ ನೋಂದಣಿ ಮಾಡಲು ಆಗದ ಕಾರಣ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ ಎಂದು ಹೇಳುವುದು ಸುಳ್ಳು. ಸೇಲ್ ಅಗ್ರಿಮೆಂಟ್ ಮಾಡುವಾಗ ದಾವಾ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸಾಕ್ಷಿಯು ಆರ್ ಟಿ ಸಿಯಲ್ಲಿ ಎಡಬ್ಲ್ಯೂ ಇದ್ದ ಕಾರಣ ಅದನ್ನು ನೋಂದಣಿ ಮಾಡಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವಾ ಸ್ವತ್ತಿಗೆ ನೋಂದಣಿ ಮಾಡಿಸಲು ಸರ್ವೆ ಸ್ಕೆಚ್

ಮತ್ತು ಇಸಿ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.  ಸದರಿ ಕ್ರಯ ಪತ್ರ ಮಾಡಿಸಲು ಅಗ್ರಿಮೆಂಟ್ ಪ್ರಕಾರ ಎರಡು ವರ್ಷ ಕಾಲಾವಧಿ ಇತ್ತು ಎಂದರೆ ಸರಿ.



ಎರಡು ವರ್ಷ ಮುಂಚಿತವಾಗಿ ಪ್ರತಿವಾದಿಗಳಿಗೆ ಎಫ್ ಎಂ ಬಿ, ಇಸಿ, ಪಟ್ಟಾ, ಎಡಿಎಲ್ಆರ್, ಸರ್ವೆ ಸ್ಕೆಚ್ ನೀಡುವಂತೆ ಮತ್ತು ಜಮೀನಿನ ಬೌಂಡರಿ ಫಿಕ್ಸ್ ಮಾಡಿಕೊಡಿ ಎಂದು ಮೂರು ನೋಟಿಸ್ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ನೋಟಿಸಿನಲ್ಲಿ ನಮ್ಮ ಬಳಿ ಹಣ ರೆಡಿ ಇದೆ ಕ್ರಯ ಪತ್ರ ಮಾಡಿಕೊಡಿ ಎಂದು ಕೇಳಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು ನೋಂದಣಿ ಮಾಡಲು ಯಾವುದೇ ಅಡಚಣೆ ಇಲ್ಲ ಎಂದರೆ ಸಾಕ್ಷಿಯು ಹಿಂದೆ ಇತ್ತು ಈಗ ಇಲ್ಲ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಅಗ್ರಿಮೆಂಟ್ ಮಾಡಿರಲಿಲ್ಲ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ಈ ದಾವಾ ಹಾಕುವ ಪೂರ್ವದಲ್ಲಿ 1ನೇ ಪ್ರತಿವಾದಿ ನನ್ನನ್ನು ಭೇಟಿಯಾಗಿ ಸಾಲವಾಗಿ ಕೊಟ್ಟ ಐದು ಲಕ್ಷ ಹಣವನ್ನು ಬಡ್ಡಿ ಸಮೇತ ಕೊಡುತ್ತೇನೆ ಎಂದು ಹೇಳಿದಾಗ ನಾನು ಸ್ವತ್ತೇ ಬೇಕೆಂದು ಕೇಳಿದ್ದೆ ಎಂದರೆ ಸುಳ್ಳು. ಸದರಿ ದಾವಾ ಸ್ವತ್ತು ಈಗ ಎಕರೆ 30 ಲಕ್ಷ ಬೆಲೆ ಬಾಳುತ್ತಿತ್ತು ಆ ಕಾರಣ ನಾನು ಜಮೀನು ಬೇಕೆಂದು ಕೇಳಿದೆನೆಂದರೆ ಸುಳ್ಳು. ಈಗಲೂ ಕೂಡ 1ನೇ ಪ್ರತಿವಾದಿ ಅಸಲು ಮತ್ತು ನಾನು ಹೇಳಿದ ಬಡ್ಡಿಯನ್ನು ಕೊಡಲು ಸಿದ್ದರಿದ್ದಾರೆ ಎಂದರೆ ಸಾಕ್ಷಿಯು ನಾನು ಯಾವುದೇ ಬಡ್ಡಿಗೆ ಸಾಲ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ.

ದಾವಾ ಸ್ವತ್ತಿನ ಮೇಲೆ ಕೆಳಗಿನ ನ್ಯಾಯಾಲಯದಲ್ಲಿ ಭಾಗಾಂಶ ಕೇಳಿ ಪ್ರತಿವಾದಿಗಳು ಮತ್ತು ಅವರ ಸಂಬಂಧಿಕರು ಕೇಸು ಹಾಕಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ನಾನು ಕೂಡ ಪಕ್ಷಕಾರರು ಎಂದರೆ ಸರಿ. ಇಲ್ಲಿಯವರೆಗೂ ನಾನು ನನ್ನ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸಮಯಾವಕಾಶ ಕೇಳಿದ್ದೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ದಾವಾ ಸ್ವತ್ತನ್ನು ಪರಭಾರೆ ಮಾಡಬಾರದು ಎಂದು ತಡೆಯಾಜ್ಞೆಯಾಗಿದೆ ಎಂದರೆ ಸರಿ. ಸದರಿ ತಡಯಾಜ್ಞೆಯನ್ನು ರದ್ದು ಪಡಿಸಲು ನಾನು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸಾಲಕ್ಕೋಸ್ಕರ ಮಾರ್ಕೆಟ್ ವ್ಯಾಲ್ಯುವನ್ನು ಅಗ್ರಿಮೆಂಟಿನಲ್ಲಿ ನಮೂದು ಮಾಡದೇ ಬರೀ ಸಾಲದ ಹಣವನ್ನು ನಮೂದು ಮಾಡಿದ್ದೇವೆ ಎಂದು ಹೇಳುವುದು ಸುಳ್ಳು.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.